# <u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>

**Ref**:7/2024

ಎಂ.ಡಬ್ಲ್ಯೂ-1

**<u>ದಿನಾಂಕ 03.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಮುಂದುವರೆದ ಪಾಟೀ ಸವಾಲುಃ 1 ನೇ ಪಕ್ಷಗಾರರ ಪರ ಶ್ರೀ.ಎಲ್.ಎಂ.ಪಿ. ವಕೀಲರಿಂದಃ**

ದಿನಾಂಕಃ 05.02.2019 ರ Liquidation ಆದೇಶ ಆದ ಮೇಲೆ ಕೂಡ 2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆ ಮಾರ್ಚ್ 2020 ರವರೆಗೂ ಉತ್ಪಾದನೆಯನ್ನು ನಡೆಸಿಕೊಂಡು ಬರುತ್ತಿತ್ತು ಎನ್ನುವುದು ನನಗೆ ಅರಿವು ಇರುತ್ತದೆ. ಮಾರ್ಚ್ 2020 ರಲ್ಲಿ ಕೋವಿಡ್ ಸೋಂಕು ಇದ್ದ ಕಾರಣ ತಾತ್ಕಾಲಿಕವಾಗಿ ಸ್ಥಗಿತ ಮಾಡಲಾಗಿತ್ತು ಎಂದು ಪ್ರಕಟಿಸಿರುವುದರ ಬಗ್ಗೆ ನನಗೆ ಅರಿವು ಇರುತ್ತದೆ. ಸಂಸ್ಥೆ ಪುನಃ ಪ್ರಾರಂಭವಾಗುವ ವರೆಗೂ ಕಾರ್ಮಿಕರಿಗೆ ವೇತನವನ್ನು ಪಾವತಿಸಲಾಗುವುದು ಎಂದು ಹೇಳಿ ಘೋಷಿಸಲಾಗಿತ್ತು ಎಂದರೆ ಸಾಕ್ಷಿ ದಾಖಲೆ ನೋಡಿ ಹೇಳಬೇಕು ಎನ್ನುತ್ತಾರೆ.

ದಿನಾಂಕಃ17.03.2020 ರಲ್ಲಿ ಎನ್.ಸಿ.ಎಲ್.ಟಿ. ಮುಂಬೈ ನ್ಯಾಯಾಲಯದಲ್ಲಿ Finquest Financial Solutions ರವರಿಗೆ 2 ನೇ ಪಕ್ಷಗಾರರ ಸಂಖ್ಯೆ-1 ರವರ ಮೇಲೆ ಮೊದಲನೆ ಆಧ್ಯತೆ ಇದೆ ಎನ್ನುವ ಆದೇಶ ಮಾಡಿರುವ ಬಗ್ಗೆ ನನಗೆ ಅರಿವು ಇಲ್ಲ. ದಿನಾಂಕಃ14.05.2020 ರಂದು ರವಿ ಶಂಕರ್ ದೇವರ ಕೊಂಡ ರವರು discharge ಮಾಡಿದ್ದರು ಎಂದರೆ ಸರಿ. ಆ ಸಂದರ್ಭದಲ್ಲೂ ಕೂಡ ಕೋವಿಡ್ ಸೋಂಕು ಇತ್ತು ಎಂದರೆ ಇರಬಹುದು. ದಿನಾಂಕಃ05.02.2019 ರ Liquidation ಆದೇಶ ಮತ್ತು ದಿನಾಂಕಃ14.05.2020 ರ ಮಧ್ಯದಲ್ಲಿ 2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆ ಹಾಗೂ ಕಾರ್ಮಿಕ ಸಂಘದವರ ಜೊತೆ ಮಾತುಕತೆ ನಡೆದಿತ್ತು ಎಂದರೆ ನನಗೆ ಅದರ ಬಗ್ಗೆ ಅರಿವು ಇಲ್ಲ.

2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ ಕಾರ್ಮಿಕರಿಗೆ ಒಂದೇ ಒಂದು ಸಂಘ ಇತ್ತು ಎಂದರೆ ನನಗೆ ಅರಿವು ಇಲ್ಲ. 2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆಯಲ್ಲಿ ಇದ್ದ ಸಂಘಕ್ಕೆ ಮಾನ್ಯತೆ ನೀಡಿದ್ದರು ಎಂದರೆ ನನಗೆ ಅರಿವು ಇಲ್ಲ ಎನ್ನುತ್ತಾರೆ. ದಿನಾಂಕಃ 05.02.2019 ರಲ್ಲಿ Liquidation ಆದೇಶ ಮಾಡಿದ ನಂತರವು ಸಹ ಅಜಯ್ ಅಗರವಾಲ್ ಎನ್ನುವವರು 2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆಯ ಮುಖ್ಯಸ್ಥರಾಗಿ ಕೆಲಸ ಮಾಡುತ್ತಿದ್ದರು ಎನ್ನುವುದರ ಬಗ್ಗೆ ನನಗೆ ಅರಿವು ಇರುತ್ತದೆ.

ದಿನಾಂಕಃ 14.05.2020 ರಲ್ಲಿ discharge ಮಾಡಿದ ನಂತರ ಸರ್ಕಾರ, ಸರ್ಕಾರದ ಪ್ರತಿನಿಧಿಗಳು ಹಾಗೂ Liquidator ಹಾಗೂ ಕಾರ್ಮಿಕ ಸಂಘದ ಪ್ರತಿನಿಧಿಗಳು ಮತ್ತು Finquest Financial Solutions ನ ಪ್ರತಿನಿಧಿಗಳ ನಡುವೆ ಸಭೆಗಳು ನಡೆದಿದ್ದವು ಎಂದರೆ ನನಗೆ ಗೊತ್ತಿಲ್ಲ. Liquidator ರವರು Finquest Financial solutions ಗೆ ಯಾವಾಗ ಹಸ್ತಂತರ ಮಾಡಿದ್ದರು ಎನ್ನುವ ಬಗ್ಗೆ ನನಗೆ ಅರಿವು ಇಲ್ಲ. 2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆಯನ್ನು ಮುಂದೆ ನಡೆಸಿಕೊಂಡು ಹೋಗಲು Finquest Financial solutions ರವರು 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯನ್ನು ಸ್ಥಾಪನೆ ಮಾಡಿರುವ ಬಗ್ಗೆ ನನಗೆ ಅರಿವು ಇದೆ. 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯನ್ನು ಕಂಪನಿ ಕಾಯ್ದೆ ಅಡಿಯಲ್ಲಿ ಯಾವಾಗ ನೋಂದಣಿ ಮಾಡಿದ್ದರು ಎನ್ನುವುದನ್ನು ನಾನು ದಾಖಲೆ ನೋಡಿ ಹೇಳಬೇಕಾಗುತ್ತದೆ.

2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆಯನ್ನು 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಗೆ ಹಸ್ತಂತರ ಮಾಡಿದ ಮೇಲೆ ಎಷ್ಟು ಜನ ಕಾರ್ಮಿಕರನ್ನು ಮುಂದುವರಿಸಬೇಕು ಎನ್ನುವುದರ ಬಗ್ಗೆ 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆ ಹಾಗೂ ಕಾರ್ಮಿಕ ಸಂಘಗಳ ನಡುವೆ ಹಲವಾರು ಚರ್ಚೆಗಳು ನಡೆದಿದ್ದವು ಎಂದರೆ 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆ ಪ್ರಾರಂಭವಾಗುವ ಮುನ್ನ ಹಾಲವಾರು ಸಭೆಗಳು ನಡೆದಿದ್ದವು ಎನ್ನುತ್ತಾರೆ.

2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆ, Liquidator, ಕಾರ್ಮಿಕ ಸಂಘ ಮತ್ತು ಕಾರ್ಮಿಕ ಇಲಾಖೆ ಇವರುಗಳ ನಡುವೆ ಹಲವಾರು ಸಭೆಗಳು ನಡೆದಿತ್ತು ಎನ್ನುವುದರ ಬಗ್ಗೆ ನನಗೆ ಅರಿವು ಇರುತ್ತದೆ. 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆ ಮತ್ತು Finquest Financial Solutions ರವರ ಮುಖ್ಯ ಕಚೇರಿ ಮುಂಬೈ ನಲ್ಲಿ ಇತ್ತು ಎನ್ನುವುದರ ಬಗ್ಗೆ ನನಗೆ ಅರಿವು ಇರುತ್ತದೆ.

2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯ ಸಂಘದ ಕಾರ್ಮಿಕರ ಜೊತೆ ಮುಂಬೈಯಲ್ಲೂ ಸಹಾ ಸಭೆ ನಡೆದಿತ್ತು ಎಂದರೆ ನನಗೆ ಅರಿವು ಇಲ್ಲ ಎನ್ನುತ್ತಾರೆ. 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆ, Liquidator, ಕಾರ್ಮಿಕ ಸಂಘ, ಕಾರ್ಮಿಕ ಇಲಾಖೆ ಇವರುಗಳ ನಡುವೆ ಸರ್ಕಾರದ ಮಟ್ಟದಲ್ಲೂ ಕೂಡ ಸಭೆ ನಡೆದಿತ್ತು ಎಂದರೆ ಹೌದು. ನವೆಂಬರ್ 2020 ರಲ್ಲಿ ಕಾರ್ಮಿಕ ಸಂಘ, 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆ ರವರ ಮಧ್ಯದಲ್ಲಿ ಕೈಗಾರಿಕ ಕಾಯ್ದೆ ಅಡಿಯಲ್ಲಿ ಒಂದು ಒಪ್ಪಂದ ಆಗಿತ್ತು ಎಂದರೆ ಡಿ.ಎಲ್.ಸಿ. ಮುಂದು ಆಗಿತ್ತು ಎನ್ನುತ್ತಾರೆ. ಸದರಿ ಒಪ್ಪಂದವು ಕೈಗಾರಿಕ ವಿವಾದ ಕಾಯ್ದೆ 12(3) ಮತ್ತು 18(3) ರ ಅಡಿಯಲ್ಲಿ ಆಗಿತ್ತು ಎಂದರೆ ಸರಿ. ಸದರಿ ಒಪ್ಪಂದ ಪ್ರಕಾರ 565 ಜನ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳಲಾಗುವುದೆಂದು ಒಪ್ಪಂದವಾಗಿತ್ತು ಎಂದರೆ ಸರಿ.

ಸದರಿ 565 ಜನ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳಲಾಗುವಾಗ ಅವರ ಅನುಭವ ಮತ್ತು ಜೇಷ್ಠತೆಯನ್ನು ಪರಿಗಣಿಸಲಾಗುವುದು ಎಂದು ಒಪ್ಪಂದವಾಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಒಪ್ಪಂದದಲ್ಲಿ sole discretion of company ಎಂದು ನಮೂದು ಆಗಿರುತ್ತದೆ ಎಂದು ಹಾಗೂ ಅವರನ್ನು ಹೊಸದಾಗಿ ನೇಮಕ ಮಾಡಿಕೊಳುವುದಾಗಿ ನಮೂದು ಇರುತ್ತದೆ ಎನ್ನುತ್ತಾರೆ.

565 ಜನ ಕಾರ್ಮಿಕರ ಪಟ್ಟಿಯನ್ನು ಸದರಿ ಒಪ್ಪಂದದ ಜೊತೆಯಲ್ಲಿ ಲಗತ್ತಿಸಿಲ್ಲ ಎಂದರೆ ಸರಿ. ಸದರಿ 565 ಜನ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳುವಾಗ ಅವರುಗಳ ಅನುಭವ ಹಾಗೂ ಜೇಷ್ಠತೆಯನ್ನು ಪರಿಗಣಿಸಿಲ್ಲ ಎಂದರೆ ನನಗೆ ಅರಿವು ಇಲ್ಲ.

ಸದರಿ 565 ಜನ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳುವ ಮುನ್ನ ನಾವು ಯಾವುದೇ ಸಂದರ್ಶನವನ್ನು ನಡೆಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಒಪ್ಪಂದದ ಪ್ರಕಾರ ನೋಟೀಸ್ ಬೋರ್ಡ್ ನಲ್ಲಿ ಆ ಬಗ್ಗೆ ನಾವು ಪ್ರಚಾರ ಮಾಡಿ ಅವರುಗಳನ್ನು ಕೆಲಸಕ್ಕೆ ತೆಗೆದುಕೊಂಡಿರುತ್ತೇವೆ ಎನ್ನುತ್ತಾರೆ. ಸದರಿ 565 ಜನ ಕಾರ್ಮಿಕರನ್ನು ಯಾವ ಆಧಾರದ ಮೇಲೆ ಕೆಲಸಕ್ಕೆ ತೆಗೆದುಕೊಳ್ಳಲಾಗಿತ್ತು ಎನ್ನುವುದನ್ನು ಕೂಡ ನಾವು ತಿಳಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು settlement ನಲ್ಲಿ solo discretion of company ಎಂದು ನಮೂದು ಇರುತ್ತದೆ ಎನ್ನುತ್ತಾರೆ. ಸದರಿ 565 ಜನರ ಹೆಸರನ್ನು ಪ್ರಕಟಣೆ ಮಾಡುವಾಗ ಕೆಲಸ ಮಾಡುತ್ತಿದ್ದ supervisor, manager ಹಾಗೂ ಮೇಲ್ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಂಡಿರುತ್ತೇವೆ ಎಂದರೆ ಇರಬಹುದು.

ಸದರಿ 565 ಜನ ಕಾರ್ಮಿಕರ ಪಟ್ಟಿಯನ್ನು ಯಾವತ್ತು ಪ್ರಕಟಣೆ ಮಾಡಿರುತ್ತಾರೆ ಎಂದರೆ ದಾಖಲೆಗಳನ್ನು ನೋಡಿ ಹೇಳಬೇಕಾಗುತ್ತದೆ ಎನ್ನುತ್ತಾರೆ. ಯಾವ ಯಾವ ಕಾರ್ಮಿಕರನ್ನು ಕೆಲಸಕ್ಕೆ ಸೇರಿಸಿಕೊಳ್ಳಲು ಆಗುವುದಿಲ್ಲವೋ ರೂ.80,000/- ಪರಿಹಾರ ಕೊಡುವುದಾಗಿ ಒಪ್ಪಂದವಾಗಿತ್ತು ಎಂದರೆ ಸರಿ. ಆ ಸಂದರ್ಭದಲ್ಲಿ 240 ಕಾರ್ಮಿಕರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಲು ಆಗಲಿಲ್ಲ.

ಸದರಿ 80 ಸಾವಿರ ರೂಪಾಯಿ ಹಣವನ್ನು 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯಿಂದ ಕೊಡುವಂತೆ ಆಗಿರಲಿಲ್ಲ ಆದರೆ 565 ಜನ ಕಾರ್ಮಿಕರ ಸಂಭಾವನೆ ಹಣದಿಂದ ಸದರಿ ಕೆಲಸಕ್ಕೆ ತೆಗೆದುಕೊಳ್ಳಲು ಆಗದೆ ಇದ್ದ ಕಾರ್ಮಿಕರಿಗೆ ಪರಿಹಾರ ನೀಡಿರುತ್ತೇವೆ ಎಂದರೆ

ಸರಿಯಲ್ಲ. ಸದರಿ ಒಪ್ಪಂದದಲ್ಲಿ ಅನುಭವಗಳನ್ನು ಪರಿಗಣಿಸಲಾಗುವುದು ಎಂದು ಉಲ್ಲೇಖವಾಗಿರುತ್ತದೆ ಎಂದರೆ ಹೌದು.

**ಈ ಹಂತದಲ್ಲಿ ಶ್ರೀ.ಎಲ್.ಎಂ.ಪಿ. ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**